**67ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ<br>ವಿಷಯ ಮತ್ತು ಕಲಿಕಾ ಹಂತ | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ<br>ವಿಷಯ ಮತ್ತು ಕಲಿಕಾ ಹಂತ | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿಮಿಷ | ಸ.ಉ.ಉ.ಕಾ. | ಶಾಲೆಯಲ್ಲಿ ಅಲಂಕಾರಿಕ ಗಿಡಗಳನ್ನು ಬೆಳೆಸುವ ಸಾಮರ್ಥ್ಯ ಕಲ್ಪನೆ ಮೂಡಿಸುವರು. | ಹೂಕುಂಡ, ಗೊಬ್ಬರ ಅಲಂಕಾರಿಕ ಗಿಡಗಳು | ಕೃತಿ | **<u>ಮುಂದುವರೆದ ಭಾಗ :</u>** ಶಿಕ್ಷಕರು ಖಾಲಿ ಕುಂಡವನ್ನು ತರಗತಿಗೆ ಪರಿಚಯಿಸುವುದು ಅದಕ್ಕೆ ಸಮನಾದ ವಿವಿಧ ಗಿಡಗಳನ್ನು ಬೆಳೆಸುವ ಬಗ್ಗೆ ತರಗತಿಯಲ್ಲಿ ವಿವರಣೆ ನೀಡುವುದು. ಗಿಡಗಳನ್ನು ನೆಡುವ ಬಗ್ಗೆ ಹಂತ ಹಂತವಾಗಿ ನೀರನ್ನುಣಿಸಿ ಜೋಪಾನವಾಗಿ ಬೆಳೆಸುವ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಶಿಕ್ಷಕರು ಪ್ರದರ್ಶನ ನೀಡುವರು. | ಸ.ಉ.ಉ.ಕಾ. | ಶಾಲೆಯಲ್ಲಿ ಅಲಂಕಾರಿಕ ಗಿಡಗಳನ್ನು ಬೆಳೆಸುವ ಸಾಮರ್ಥ್ಯ ಕಲ್ಪನೆ ಮೂಡಿಸುವರು. | ಹೂಕುಂಡ, ಗೊಬ್ಬರ ಅಲಂಕಾರಿಕ ಗಿಡಗಳು | ಕೃತಿ | ಎರಡನೇ ತರಗತಿ ವಿದ್ಯಾರ್ಥಿಗಳೊಂದಿಗೆ 3ನೇ ತರಗತಿಯ ವಿದ್ಯಾರ್ಥಿಗಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿಮಿಷ | | | ರೇಡಿಯೋ | | ಚಿಣ್ಣರ ಚುಕ್ಕಿ ರೇಡಿಯೋ ಕಾರ್ಯಕ್ರಮ. | | | | | ಚಿಣ್ಣರ ಚುಕ್ಕಿ ರೇಡಿಯೋ ಕಾರ್ಯಕ್ರಮ. |
| 4ನೇ | 10 ನಿ | ಪರಿಸರ ಅಧ್ಯಯನ<br>ಆಹಾರ ಏಕೆ ಬೇಕು? | * ಆಹಾರದಲ್ಲಿ ವಿವಿಧತೆಯನ್ನು ಗುರುತಿಸುವರು.<br>* ಕೆಲಸ ಮಾಡಲು ಆಹಾರ ಅವಶ್ಯಕತೆಯನ್ನು ತಿಳಿಸುವರು. | ಚಿತ್ರ ಚಾರ್ಟುಗಳು, ಪ್ರಶ್ನೆಗಳ ಪಟ್ಟಿಗಳು | ಕೃತಿ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** "ಡೊಳ್ಳು ಹೊಟ್ಟೆ ಗಣಪ" ಅಭಿನಯ ಗೀತೆ ಹಾಡಿಸುವರು. | ಪರಿಸರ ಅಧ್ಯಯನ<br>ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು | * ವಸ್ತು ಸುತ್ತಲಿನ ವಸ್ತುಗಳನ್ನು ಗುಣಗಳ ಆಧಾರದ ಮೇಲೆ ಗುರುತಿಸುವರು.<br>* ವಸ್ತುಗಳ ಮೂರು ಸ್ಥಿತಿಗಳನ್ನು ತಿಳಿಸುವರು. * ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಸ್ತು ಬದಲಾಗಬಲ್ಲದು ಎಂಬುದನ್ನು ಅರಿಯುವರು. | ಪ್ರಶ್ನೆಗಳ ಪಟ್ಟಿಗಳು, ಪಟ್ಟಿ ಮಾಡುವ ಕಾರ್ಡುಗಳು | ಕೃತಿ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** "ಡೊಳ್ಳು ಹೊಟ್ಟೆ ಗಣಪ" ಅಭಿನಯ ಗೀತೆಯನ್ನು 2ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಹಾಡುವರು. |
| | 5 ನಿ | | | | | ಪ್ರಶ್ನೆಗಳಿಗೆ ಉತ್ತರ ಪಡೆಯಲು ಹಿರೇಮಣಿಗೆ ಸೂಚಿಸುವರು. | | | | | ವಿದ್ಯಾರ್ಥಿಗಳು ಮುಂದಿನ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ಚರ್ಚೆ | * ಆಹಾರವನ್ನು ಏಕೆ ಸೇವಿಸಬೇಕು?<br>* ದಿನನಿತ್ಯ ಆಹಾರದಲ್ಲಿ ನಾವು ಬಳಸುವ ಪದಾರ್ಥಗಳಾವುವು?<br>ಇಂತಹ ಹಲವು ಪ್ರಶ್ನೆಗಳ ಚಾರ್ಟುಗಳ ಮೂಲಕ ಹಿರೇಮಣಿಯು ಕೇಳಿ ಉತ್ತರ ಪಡೆಯುವರು. | | | | ಕೃತಿ | **<u>ಮೌಲ್ಯಮಾಪನ ಚಟುವಟಿಕೆ :</u>**<br>ವಿವಿಧ ವಸ್ತುಗಳನ್ನು ನೀಡಿ ಅವುಗಳನ್ನು ಗಮನಿಸಿ ಹೊಳೆಯುವ ಹೊಳೆಯದ ವಸ್ತುಗಳಾಗಿ ವಿಂಗಡಿಸಲು ತಿಳಿಸುವರು.<br>ಗಾಜು, ಮಣಿ, ಹಲಗೆ, ಕಾಗದ, ಇಟ್ಟಿಗೆ ಮುಂತಾದವು. |
| | 10 ನಿ | | | | | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಕೃತಿ | **<u>ಮೌಲ್ಯಮಾಪನ ಚಟುವಟಿಕೆ</u>**<br>ಪ್ರತಿನಿತ್ಯ ನಾವು ಎಂತಹ ಆಹಾರವನ್ನು ಸೇವಿಸಬೇಕು ಮುಂತಾದ ಪ್ರಶ್ನೆಗಳನ್ನು ತಯಾರಿಸಿಕೊಂಡು ಮಕ್ಕಳಿಗೆ ಮೌಲ್ಯಮಾಪನ ಮಾಡುವರು. | | | | ಚರ್ಚೆ | ಮಕ್ಕಳು ಹಿರೇಮಣಿ ನೇತೃತ್ವದಲ್ಲಿ ಹೊಳೆಯುವ, ಹೊಳೆಯದ, ಹಗುರವಾದ ಮತ್ತು ಭಾರವಾದ ವಸ್ತುಗಳನ್ನು ಪಟ್ಟಿ ಮಾಡುವರು. |
| | 5 ನಿ | | | | | | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |